# <u>ನಿತ್ಯವೂ ಮಾಡಬೇಕಾದ ಅನುಸಂಧಾನ</u>

೧. ಬೆಳಿಗ್ಗೆ ಏಳುವಾಗ ಭೂದೇವಿಯನ್ನು ಸ್ಮರಿಸಿ ನಂತರ ಕರಾಗ್ರೇ ವಸತೇ ಲಕ್ಷ್ಮೀ ಎಂಬ ಶ್ಲೋಕವನ್ನು ಹೇಳಿ ತತ್ವಾಭಿಮಾನಿ ದೇವತೆಗಳಿಗೂ, ಗುರುಗಳಿಗೂ ನಮಸ್ಕಾರ ಮಾಡಬೇಕು.

೨. ವಿರಾಟರೂಪಿ ಚಿತ್ರವನ್ನು ನೋಡುತ್ತಾ ಚಿಂತನೆ ಮಾಡಿ ದೋಷವಿದೂರ ಗೋವಿಂದ ಶುಭಗುಣ ಪೂರ್ಣ ಗೋವಿಂದ ಎನ್ನು ೧೦೦ ಬಾರಿ ಹೇಳಿ ಚಿಂತನೆ ಮಾಡಬೇಕು.

೩. ಸಂಕ್ಷೇಪವಾಗಿ ನಮ್ಮ ಸುತ್ತಲೂ ವಿರಾಡ್ರೂಪ ಇದೆ ಎಂದು ಸ್ಮರಿಸಿ ನಮಿಸಿ ಆತನೇ ನಮ್ಮ ಶರೀರದಲ್ಲಿ ಆಯಾ ಅಂಗಗಳಲ್ಲಿ ತನ್ನ ಅಂಗಗಳನ್ನಿಟ್ಟು ಕ್ರಮವಾಗಿ ನಿಂತಿರುವನೆಂದು ಚಿಂತಿಸಿ ಆತನೇ [ನಮ್ಮ]ಕೈಕಾಲುಗಳಲ್ಲಿ ತನ್ನ ಕೈಕಾಲುಗಳನ್ನಿಟ್ಟು ಕ್ರಮವಾಗಿ ಆತನೇ ಶರೀರದಲ್ಲಿ ನಮ್ಮ ಕೈಕಾಲುಗಳನ್ನು ತೊಳೆಯುವ ಕೆಲಸವನ್ನೂ ಮಾಡಿ ಮಾಡಿಸುತ್ತಿದ್ದಾನೆ ಎಂದು ತಿಳಿದು ನಮಿಸಬೇಕು.

೪. ಬಹಿರ್ದೇಶಕ್ಕೆ ಹೋದಾಗ ಕೇಶವನನ್ನು ಸ್ಮರಿಸಿ ದೇವಮಂದಿರವೆಂಬ ಶರೀರದ ಶುದ್ಧೀಕರಣ ಮಾಡಿ ಮಾಡಿಸುತ್ತಿದ್ದಾನೆಂಬ ಚಿಂತನೆ ಮಾಡಿ ಬಿಂಬ ಪ್ರತಿಬಿಂಬ ಭಾವದಿಂದ ನಡೆವ ಕ್ರಿಯೆಯಲ್ಲಿ ಹುಟ್ಟಿ ಬಂದ ಅನೇಕ ಭಗವದ್ರೂಪಗಳನ್ನು ಪೂಜತ್ವೇನ ಸ್ವೀಕರಿಸುತ್ತಿದ್ದಾನೆಂದು ತಿಳಿದು ಮಲಮೂತ್ರಗಳು ಕಲಿಗೆ ಆಹಾರವೆಂದು ಚಿಂತಿಸಬೇಕು.

೫. ವರಾಹದೇವರನ್ನು ಚಿಂತಿಸುತ್ತಾ ಮೃತ್ತಿಕಾ ಶೌಚವನ್ನು ಮಾಡಿಕೊಳ್ಳಬೇಕು. ಈ ಇಂದ್ರಿಯ ವ್ಯಾಪಾರಗಳಲ್ಲಿ ಹುಟ್ಟಿಬಂದ ಅನೇಕ ದೇವತೆಗಳ ದೇವರ

ರೂಪಗಳು ಸ್ಥೂಲದೇಹದಲ್ಲಿರುವ ಅವರವರಲ್ಲಿ ಪೂಜತ್ವೇನ ಐಕ್ಯಹೊಂದುತ್ತಿವೆ ಎಂದು ಚಿಂತಿಸಬೇಕು, ಕೈಕಾಲು ತೊಳೆಯುವುದು ದೇವರಿಗೆ ಪಾದಪ್ರಕ್ಷಾಲನೆ. ಹಂಸನಾಮಕ ಪರಮಾತ್ಮನನ್ನು ಚಿಂತಿಸುತ್ತಾ ಹಲ್ಲುಜ್ಜುವಾಗ ಮಂದಿರದ ದ್ವಾರ ಶುದ್ದಿ ಎಂದು ಚಿಂತಿಸಿ ಅಲ್ಲಲ್ಲಿ ಹುಟ್ಟಿದ ಭಗವದ್ರೂಪವನ್ನು ಐಕ್ಯ ಚಿಂತಿಸಿ ಬಿಂಬನಿಗೆ ಪೂಜೆ ಎಂದು ಅರ್ಪಿಸಬೇಕು. ಆಸನದಲ್ಲಿ ಕುಳಿತು ರಾತ್ರಿ ಮಲಗಿದಾಗಿನಿಂದ ಬೆಳಿಗ್ಗೆ ಏಳುವವರೆಗೂ ನಿದ್ರಾ, ಉಭಯ, ಸ್ವಪ್ನ, ಮೋಹ, ಸುಷುಪ್ತಿ ಅವಸ್ಥೆಗಳಲ್ಲಿ ಮಾಡಿಸಿದ ನಾನಾ ವ್ಯಾಪಾರಗಳಿಂದ ಪ್ರಕಟವಾದ ಭಗವದ್ರೂಪಗಳನ್ನು, ಸುಷುಪ್ತಿಯಲ್ಲಿ ಉಂಟಾದ ಸುಖದಿಂದ ಬಂದ ರೂಪಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಚಿಂತಿಸಿ ಕ್ರಮವಾಗಿ ಗುರುವಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಕೃಷ್ಣಾರ್ಪಣವನ್ನು ಬಿಡಬೇಕು.

೬. ಮಾನಸಿಕ ತೀರ್ಥ ಯಾತ್ರೆಯನ್ನು ಮಾಡಿ ಅ ಚಿಂತನೆಯಲ್ಲಿ ಹುಟ್ಟಿದ ರೂಪಗಳನ್ನು ಬಿಂಬನಿಗೆ ಅರ್ಪಿಸಬೇಕು.

೭. ಶುಭೇ ಶೋಭನೇ ಮುಹೂರ್ತೇ.....ಶುಭ ತಿಥೌ, ಮಚ್ಛರೀರಗತ ಸಕಲ ಕ್ಷೇತ್ರಾಭಿಮಾನಿ, ವನಾಭಿಮಾನಿ,ಪರ್ವತಾಭಿಮಾನಿ, ಸಮುದ್ರಾಭಿಮಾನಿ, ನದ್ಯಾಭಿಮಾನಿ,ತೀರ್ಥಾಭಿಮಾನಿ, ವಾಪಿ, ಕೂಪ, ತಟಾಕಾದಿ ಅಭಿಮಾನಿ ದೇವತಾಂತರ್ಗತ, ಕರ್ಮಾಭಿಮಾನಿ ಪುಷ್ಕರಾಂತರ್ಗತ, ಜಲಾಭಿಮಾನಿ ಬುಧಾಂತರ್ಗತ, ಸಕಲ ತತ್ವಾಭಿಮಾನಿ ದೇವತಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಗೋಪಾಲಕೃಷ್ಣಾಂತರ್ಗತ ಪರಮಗುರು ಬಿಂಬಾಭಿನ್ನ, ಗುರುಬಿಂಬಾಭಿನ್ನ, (ಪತಿಬಿಂಬಾಭಿನ್ನ) ಮದ್ಬಿಂಬಮೂರ್ತಿ ಶ್ರೀಹರಿ ಪ್ರೇರಣೆಯಾ ಶ್ರೀಹರಿ ಪ್ರಿತ್ಯರ್ಥಂ ಅದ್ಯ ಪ್ರಾತರಾರ್ಭ್ಯಸ್ಚ ಪ್ರಾತಃ ಪ್ರರ್ಯಂತಂ ಸಮಸ್ತ ಕರ್ಮಾಣಿ ಶ್ರೀಹರಿ ಕತೃತ್ವ, ಕಾರಯಿತೃತ್ವ, ಭೋಕ್ತೃತ್ವ, ಭೋಜಯಿತೃತ್ವಾದಿ

ಅನುಸಂಧಾನ ಪೂರ್ವಕಂ ಕರಿಷ್ಯೇ. ತದಂಗತ್ವೇನ ಪ್ರಾತಃಸ್ನಾನಮಹಂ ಕರಿಷ್ಯೇ.. ಎಂಬ ಸಂಕಲ್ಪ ಪೂರ್ವಕವಾಗಿ ವಸ್ತ್ರ ಸಮೇತರಾಗಿ ಸ್ನಾನ ಮಾಡಬೇಕು. ಮಾನಸಿಕಸ್ನಾನವನ್ನು ತೀರ್ಥಗಳಲ್ಲಿ ಮಾಡಬೇಕು. ಚಿಂತನೆ ಮಾಡಿದ ಹೊರಗಿನ ದೇವತೆಗಳಲ್ಲಿರುವ ದೇವರನ್ನು ನೀರಿನಲ್ಲಿರುವ ದೇವರನ್ನು ಐಕ್ಯ ಮಾಡಿ ನಮ್ಮ ಶರೀರದ ಸುತ್ತಲೂ ಇರುವ ವಿರಾಡ್ರೂಪಕ್ಕೆ ಐಕ್ಯ ಚಿಂತನೆಯಿಂದ ಸ್ನಾನಮಾಡಬೇಕು.

ಪುರುಷರೂಪತ್ರಯ ಪುರಾತನ।
ಪುರುಷ ಪುರುಷೋತ್ತಮ ಕ್ಷರಾಕ್ಷರ ।
ಪುರುಷ ಪೂಜಿತಪಾದ ಪೂರ್ಣಾನಂದ ಜ್ಞಾನಮಯ।
ಪುರುಷಸೂಕ್ತ ಸುಮೇಯ ತತ್ತತ್।
ಪುರುಷ ಹೃತ್ಪುಷ್ಕರ ನಿಲಯ ಮಹಾ।
ಪುರುಷಜಾಂಡಾಂತರದಿ ವ್ಯಾಪ್ತ ನಿರ್ಲಿಪ್ತ॥

ಎಂದು ಹೇಳುತ್ತಾ ಸ್ನಾನ ಮಾಡಬೇಕು. ಆ ಸ್ನಾನದಲ್ಲಿ ದೇವರ ಅಭಿಷೇಕಕ್ಕೆ ಬಂದು ನಿಂತಿಹ ದೇವತೆಗಳಿಗೆ ನಮಿಸಬೇಕು. ಅಲ್ಲೆಲ್ಲಾ ಹುಟ್ಟಿದ ಭಗವದ್ರೂಪಗಳನ್ನು ಚಕ್ರಾಬ್ಜಮಂಡಲದ ಮೂಲಕ ಕೃಷ್ಣಾರ್ಪಣ ಎನ್ನಬೇಕು.

೮. ಮನೆಯ ಕೆಲಸವನ್ನು ಮಾಡುವಾಗ ಮನೆಯನ್ನು ದೇವರ ಮಂದಿರ ಎಂದು ಅಲ್ಲಿರುವ ವ್ಯಕ್ತಿಗಳ ಅಂತರ್ಗತ ಶ್ರೀಹರಿಯ ಸೇವೆಯೆಂದು ಎಲ್ಲಾ ಕೆಲಸಗಳನ್ನೂ ನನ್ನಲ್ಲಿ ನಿಂತು ಮಾಡಿ ಮಾಡಿಸುತ್ತಿದ್ದಾನೆಂದು ಚಿಂತಿಸಿ ಅಲ್ಲಲ್ಲಿ ಪ್ರಕಟವಾದ ಭಗವದ್ರೂಪಗಳನ್ನು ಚಕ್ರಾಬ್ಜಮಂಡಲದ ಮೂಲಕ ಅರ್ಪಿಸಬೇಕು.

೯. ಸಕಲ ವಿವಿಧ ಕಾರ್ಯಗಳಲ್ಲಿಯೂ, ಬಿಂಬ ಪ್ರತಿಬಿಂಬ ಭಾವದಿಂದ ತತ್ವಾಭಿಮಾನಿಗಳೇ ಮಾಡಿ ಮಾಡಿಸಿ ಪ್ರಕಟವಾಗಿರುವ ರೂಪಗಳನ್ನು ದೇವರ

ಪೂಜೆ ಎಂದು ಅರ್ಪಿಸುತ್ತಿದ್ದಾರೆ, ನನ್ನನ್ನು ನಿಮಿತ್ತಮಾತ್ರಾ ಮಾಡಿದ್ದಾರೆಂದು ತಿಳಿಯಬೇಕು.

೧೦. ರಾತ್ರಿ ಮಲಗುವಾಗ ಬೆಳಿಗ್ಗಿನಿಂದ ಮಾಡಿದ ಕಾರ್ಯಗಳನ್ನು, ರೂಪಗಳನ್ನು ನೆನಪಿಗೆ ತಂದು ಅರ್ಪಣೆ ಮಾಡಿ ಮನಸ್ಸಿನಲ್ಲಿ ಮಂತ್ರಾಕ್ಷತೆ ನೀರನ್ನು ಬಿಟ್ಟು, ದೋಷ ವಿದೂರ ಗೋವಿಂದ ಶುಭಗುಣ ಪೂರ್ಣ ಗೋವಿಂದ ಎಂದು ೧೦೮ ಬಾರಿ ಜಪಿಸಿ ಅದನ್ನೂ ಅರ್ಪಿಸಿ ಮಲಗಬೇಕು.

## ಬೃಹತೀ ಯಜ್ಞಾನುಸಂಧಾನ

೧. ನನ್ನ ಶರೀರದ ಸುತ್ತಲೂ ಇರುವ ೩೬೦ ಅಸ್ಥಿಗಳಲ್ಲಿ(ಇಷ್ಟಿಕ) ೩೬೦ ಪರ್ವತಾಭಿಮಾನಿಗಳಂತರ್ಗತ ತತ್ವಾಭಿಮಾನಿ ದೇವತೆಗಳಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಅನಿರುದ್ಧಾನಿಗೆ ನಮೋನಮಃ.
೨. ನನ್ನ ಶರೀರದಲ್ಲಿರುವ ಸಪ್ತಧಾತುಗಳಲ್ಲಿರುವ ತತ್ವಾಭಿಮಾನಿ ದೇವತಾಂತರ್ಗತ ಭಾ.ಮು.ಪ್ರಾ.ಅಂತರ್ಗತ ಶ್ರೀ ಸಂಕರ್ಷಣಾನಿಗೆ ನಮೋನಮಃ.

೩. ಈ ಶರೀರದ ಮುಖದಲ್ಲಿ ಆವಹನೀಯ ಅಗ್ನಿ, ಹೃದಯದಲ್ಲಿ ಗಾರ್ಹಪತ್ಯ ಅಗ್ನಿ, ನಾಭಿಯಲ್ಲಿರುವ ದಕ್ಷಿಣಾಗ್ನಿ, ನಾಭಿಯ ಬಲಭಾಗದಲ್ಲಿರುವ ಸಭ್ಯಾಗ್ನಿ, ನಾಭಿಯ ಎಡಭಾಗದಲ್ಲಿರುವ ಅವಶರಭಿ ಅಗ್ನಿ, ಇವುಗಳಲ್ಲಿರುವ ಅಗ್ನಿ ಅಂತರ್ಗತ ತತ್ವಾಭಿಮನಿ ದೇವತಾಂತರ್ಗತ ಭಾ.ಮು.ಪ್ರಾಣಾಂತರ್ಗತನಾದ ಶ್ರೀಹರಿಣೀಪತಿ ಪರಶುರಾಮನಿಗೆ ನಮೋನಮಃ.

೪. ನನ್ನ ಶರೀರದಲ್ಲಿರುವ ೭೨,೦೦೦ನಾಡಿಗಳಲ್ಲಿ ಕಲಶಸ್ಥಾನದಲ್ಲಿರುವ ೩೬,೦೦೦ ಬಲನಾಡಿಗತ ೩೬,೦೦೦ ಪುರುಷದೇವತಾಂತರ್ಯಾಮಿ ತತ್ವಾಭಿಮಾನಿಗಳಂತರ್ಗತ ಭಾ.ಮು.ಪ್ರಾ. ಬೃಹತೀ ಸಹಸ್ರ ಋಕ್ಕಿನ ೩೬,೦೦೦

ಸ್ವರಾಕ್ಷರ ಪ್ರತಿಪಾದ್ಯನಾದ ಗರುಡವಾಹನ ಪುರುಷರೂಪಿ ೩೬,೦೦೦ ಭಗವದ್ರೂಪಗಳಿಗೆ ನಮೋನಮಃ.

೫. ನನ್ನ ಶರೀರದಲ್ಲಿರುವ ೭೨,೦೦೦ ನಾಡಿಗಳಲ್ಲಿ ಕಲಶಸ್ಥಾನದಲ್ಲಿರುವ ೩೬,೦೦೦ ಎಡನಾಡಿಗತ ೩೬೦೦೦ ಸ್ತ್ರೀದೇವತೆಗಳಲ್ಲಿರುವ ತತ್ವಾಭಿಮಾನಿಗಳಂತರ್ಗತ ಭಾ.ಮು.ಪ್ರಾ. ಬೃಹತೀ ಸಹಸ್ರ ಋಕ್ಕಿನ ೩೬,೦೦೦ ವ್ಯಂಜನಾಕ್ಷರ ಪ್ರತಿಪಾದ್ಯ ಗರುಡವಾಹನ ಸ್ತ್ರೀರೂಪಿ ೩೬,೦೦೦ ಭಗವದ್ರೂಪಗಳಿಗೆ ನಮೋನಮಃ.

೬. ಆ ಕಲಶಗಳಲ್ಲಿ ಪ್ರಧಾನ ಕಲಶವಾದ ಸುಷುಮ್ನನಾಡಿ ಅದರ ಸುತ್ತಲೂ ಇರುವ ನಾಲ್ಕು ನಾಡಿಗಳಲ್ಲಿರುವ ಪಂಚರೂಪಿಗೆ ನಮೋನಮಃ.

೭. ಈ ಐದು ನಾಡಿಗಳಿಂದ ಹುಟ್ಟಿದ ನೂರು ನಾಡಿಕಲಶಗಳಲ್ಲಿ ನಿಂತಿರುವ ನಾರಾಯಣಾದಿ ನೂರುರೂಪಗಳಿಗೆ ನಮೋನಮಃ.

೮. ಈ ನೂರು ನಾಡಿಗಳಿಂದ ಹುಟ್ಟಿದ ಸಾವಿರನಾಡಿ ಕಲಶಗಳಲ್ಲಿ ನಿಂತಿರುವ ವಿಶ್ವಾದಿ ಸಹಸ್ರರೂಪಗಳಿಗೆ ನಮೋನಮಃ.

೯. ಈ ಸಾವಿರ ನಾಡಿಗಳಿಂದ ಹುಟ್ಟಿದ ೭೨,೦೦೦ ನದಿಕಲಶಗಳಲ್ಲಿರುವ ೭೨,೦೦೦ ಬೃಹತೀ ರೂಪಗಳಿಗೆ ನಮೋನಮಃ.

೧೦. ನನ್ನ ನಾಲ್ಕೂ ದೇಹಗಳ ಸಕಲೇಂದ್ರಿಯಗಳಲ್ಲೂ, ಸಪ್ತಧಾತುಗಳಲ್ಲಿಯೂ ಶರೀರದ ಕಣಕಣದಲ್ಲಿಯೂ ನಿಂತಿರುವ ಮಾನಸಿಕ, ಕಾಯಿಕ, ವಾಚಿಕ

ಕರ್ಮಗಳಲ್ಲಿ ಪ್ರಕಟವಾದ ಅನೇಕ ದೇವತೆಗಳ ರೂಪಗಳಲ್ಲಿ ನಿಂತಿರುವ ಅನಂತ ಭಗವದ್ರೂಪಗಳಿಗಿಂದ ಅಭಿನ್ನನಾದ ನನ್ನ ಬಿಂಬಮೂರ್ತಿಗೆ ನಮೋನಮಃ.

೧೧. ಆಯಾ ಇಂದ್ರಿಯಗಳಲ್ಲಿ ಮೊದಲೇ ಇರುವ ರೂಪಗಳನ್ನು ನಂತರ ಪ್ರಕಟಾವಾಗುವ ಅನಂತ ಭಗವದ್ರೂಪಗಳನ್ನು ಯಜ್ಞತ್ವೇನ ಐಕ್ಯಮಾಡಿಕೊಳ್ಳುವ ಬಿಂಬನಿಗೆ ನಮೋನಮ್ಃ.

೧೨. ಆಯಾ ಇಂದ್ರಿಯಗಳಿಂದ ಗ್ರಹಿಸುವ ಆಯಾ ಪದಾರ್ಥಗಳಲ್ಲಿ ಮೊದಲೇನಿಂತಿರುವ ಆಯಾ ದೇವತೆಗಳಲ್ಲಿ ನಿಂತಿರುವ ಅನಂತ ಭಗವದ್ರೂಪಗಳನ್ನು, ಹನ್ನೊಂದು ಇಂದ್ರಿಯಗಳ ಮೂಲಕ, ನನ್ನ ಶರೀರದಲ್ಲಿರುವ ಪಂಚ ಜ್ಞಾನೇಂದ್ರಿಯಗಳೆಂಬ ಐದು ಕುಂಡಗಳಲ್ಲಿರುವ ಬಿಂಬಮೂರ್ತಿಯ ಯಜ್ಞರೂಪಗಳಲ್ಲಿ ಐಕ್ಯಮಾಡುವುದೇ ಯಜ್ಞ. ಈ ಯಜ್ಞದಲ್ಲಿ ಪ್ರತಿದಿವಸ ಹನ್ನೊಂದು ಇಂದ್ರಿಯಗಳಿಂದ ಸ್ವೀಕರಿಸುವ ಸಕಲ ಪದಾರ್ಥಗಳಲ್ಲಿ ಆಯಾ ಇಂದ್ರಿಯಗಳಲ್ಲಿ ಮೊದಲೇ ನಿಂತು ಆಯಾ ಪದಾರ್ಥಗಳಲ್ಲಿರುವ ಆಯಾ ಇಂದ್ರಿಯಗಳಲ್ಲಿರುವ ಭಗವದ್ರೂಪಗಳನ್ನು ಬೃಹತೀ ಋಕ್ಕುಗಳಿಂದ ಯಜ್ಞವೆಂದು ಅರ್ಪಿಸುವ ಋತ್ವಿಜರೆಂದು ಕರೆಸುವ ತತ್ವಾಭಿಮಾನಿಗಳಿಗೆ ನಮೋನಮಃ.

೧೩. ಇಂದು ಬೆಳಿಗ್ಗಿನಿಂದ ಮರುದಿನದ ಬೆಳಿಗಿನವರೆಗೂ ಸಕಲೇಂದ್ರಿಯ ವ್ಯಾಪಾರಗಳಲ್ಲಿ ಹುಟ್ಟಿದ ಭಗವದ್ರೂಪಗಳನ್ನು ಆಹುತಿ ಎಂದು ಚಿಂತಿಸಿ ಬಿಂಬಮೂರ್ತಿಗೆ ಐಕ್ಯ ಚಿಂತಿಸಿ ದೇವರಿಗೆ ನಮಸ್ಕರಿಸುವುದೇ ಪೂರ್ಣಾಹುತಿಯೆಂದು ಸಲ್ಲಿಸಬೇಕು. ಇದು ಆಧ್ಯಾತ್ಮಿಕ ಬೃಹತೀ ಸಹಸ್ರದ ಸಂಕ್ಷೇಪ ಚಿಂತನಾಕ್ರಮ.

॥ಶ್ರೀಕೃಷ್ಣಾರ್ಪಣಮಸ್ತು॥

## ಮುಖಸುಳಾದಿ (ವಿರಾಡ್ರೂಪ)

೧. ವೈಕುಂಠಲೋಕವೆಂದು ಕರೆಸಿಕೊಂಡ ಶಿರಸ್ಸಿನ ೧೨ಅಂಗುಲಿಯ ಮೇಲೆ ಇರುವ ಚಂದ್ರಕಾಂತಿಯ ಬಣ್ಣದ ಹನ್ನೆರಡು ದಳದ ಕಮಲದಲ್ಲಿ ನಿಯಾಮಕನಾದ ಭಾ.ಮು.ಪ್ರಾ.ಬಿಂಬಾಭಿನ್ನ ಅಪಮೃತ್ಯು ಪರಿಹಾರಕ ವಾಸುದೇವನಿಗೆ ನಮೋನಮಃ.

೨. ಸತ್ಯಲೋಕವೆಂದು ಕರೆಸಿಕೊಂಡ ಶಿರಸ್ಸಿನಲ್ಲಿರುವ ವಜ್ರಕಾಂತಿ ಬಣ್ಣದ ಸಾವಿರ ಕೇಸರಗಳಿಂದ ಕೂಡಿದ ಸಾವಿರದಳದ ಕಮಲದಲ್ಲಿ ನಿಯಾಮಕನಾದ ಬ್ರಹ್ಮದೇವನು ಋಜುಗಳಿಂದ ಕೂಡಿಕೊಂಡು ಪೂಜಿಸುವ ವಿರಾಡ್ರೂಪಿಗೆ ನಮೋನಮಃ.(ಪ್ರತಿಯೊಂದು ದಳದಲ್ಲೂ ವಿಷ್ಣುಸಹಸ್ರನಾಮದ ಒಂದು ರೂಪ ಹಾಗೂ ಋಜುಗಳಿರುತ್ತಾರೆ).

೩. ತಪೋಲೋಕವೆಂದು ಕರೆಸಿಕೊಂಡು ಹುಬ್ಬಿನ ಮಧ್ಯದಲ್ಲಿರುವ ಕೆಂಪುಬಣ್ಣದ ಎರಡು ದಳದ ಕಮಲದಲ್ಲಿ ನಿಯಾಮಕರಾದ ಗರುಡದೇವರು ಪೂಜಿಸುವ ಭಾ.ಮು.ಪ್ರಾ. ಬಿಂಬಾಭಿನ್ನ (ಸಂತತ ಚಿಂತನ) ಶ್ರೀಕೃಷ್ಣನಿಗೆ ನಮೋನಮಃ.

೪. ಜನೋಲೋಕವೆಂದು ಕರೆಸಿಕೊಂಡು ಇಂದ್ರಯೋನಿಯಲ್ಲಿರುವ ಹವಳ ಬಣ್ಣದ ಹದಿನಾರುದಳದ ಕಮಲದಲ್ಲಿ ನಿಯಾಮಕರಾದ ಶೇಷದೇವರು, ದಧಿವಾಮನೋಪಾಸಕರಾದ ಚಂದ್ರಕಲಭಿಮಾನಿಗಳಾದ ದೇವತೆಗಳ ಒಳಗಿದ್ದುಕೊಂಡು ಪೂಜಿಸುವ ಭಾ.ಮು.ಪ್ರಾ. (ನಿಶ್ಚಯಜ್ಞಾನ) ಲಕ್ಷ್ಮೀನಾರಾಯಣನಿಗೆ ನಮೋನಮಃ.

೫. ಮಹರ್ಲೋಕವೆಂದು ಕರೆಸಿಕೊಂಡು ಉರಸ್ಸಿನಲ್ಲಿರುವ ಪಿಂಗಳ ಬಣ್ಣದ ಹನ್ನೆರಡುದಳದಕಮಲದಲ್ಲಿ ನಿಯಾಮಕರಾದ ರುದ್ರದೇವರು ಪೂಜಿಸುವ ಭಾ.ಮು.ಪ್ರಾ. ಬಿಂಬಾಭಿನ್ನನಾದ ಶಕ್ತ್ಯಾದಿರೂಪಗಳೊಡನೆ ಇರುವ (ಲಕ್ಷ್ಮೀನಾರಸಿಂಹ) ಶ್ರೀಹರಿಗೆ ನಮೋನಮಃ.

೬. ಸುವರ್ಲೋಕವೆಂದು ಕರೆಸಿಕೊಂಡು ಹೃದಯದಲ್ಲಿರುವ ಉದಿತಾರ್ಕ ಬಣ್ಣದ ಅಷ್ಟದಳದ ಕಮಲದಲ್ಲಿ ನಿಯಾಮಕರಾದ ಇಂದ್ರದೇವರು ಅಷ್ಟದಿಕ್ಪಾಲಕರಿಂದ ಕೂಡಿಕೊಂಡು ಪೂಜಿಸುವ ಭಾ.ಮು.ಪ್ರಾ ಬಿಂಬಾಭಿನ್ನ ಪ್ರಾದೇಶ, ಮೂಲೇಶ, ಅಗ್ರೇಶ ಅಭಿನ್ನ (ಲಕ್ಷ್ಮೀನಾರಾಯಣ) ಸಂಕರ್ಷಣನಿಗೆ ನಮೋನಮಃ.

೭. ಭುವರ್ಲೋಕವೆಂದು ಕರೆಸಿಕೊಂಡು ನಾಭಿಯಲ್ಲಿರುವ ರಕ್ತಬಣ್ಣದ ಆರುದಳದ ಕಮಲದಲ್ಲಿ ನಿಯಾಮಕನಾದ ಗಣೇಶನು ಷಣ್ಮಹಿಷಿಯರಿಂದ ಕೂಡಿಕೊಂಡು ಪೂಜಿಸುವ ಭಾ.ಮು.ಪ್ರಾ. ಬಿಂಬಾಭಿನ್ನ (ನಿರ್ವಿಘ್ನ) ಪ್ರದ್ಯುಮ್ನನಿಗೆ ನಮೋನಮಃ.

೮. ಭೂಲೋಕವೆಂದು ಕರೆಸಿಕೊಂಡು ಮೂಲಸ್ಥಾನದಲ್ಲಿರುವ ಮಾಣಿಕ್ಯ ಬಣ್ಣದ ನಾಲ್ಕುದಳದ ಕಮಲದಲ್ಲಿ ನಿಯಾಮಕನಾದ ಸ್ವಾಯಂಭುವಮನುವು ವೇದಾಭಿಮಾನಿಗಳಾದ ಬೃಹಸ್ಪತಿ, ಬುಧ, ಸೋಮ, ಶನೈಶ್ಚರರಿಂದ ಕೂಡಿಕೊಂಡು ಪೂಜಿಸುವ ಭಾ.ಮು.ಪ್ರಾ.ಬಿಂಬಾಭಿನ್ನ (ಗುರುಪ್ರಾಪ್ತಿ) ಅನಿರುದ್ಧನಿಗೆ ನಮೋನಮಃ.

೯. ಅತಲಲೋಕವೆಂದು ಕರೆಸಿಕೊಂಡಿರುವ ಮೇಲಿನ ಎರಡು ತೊಡೆಗಳಲ್ಲಿರುವ ಭಾ.ಮು.ಪ್ರಾ.ಬಿಂಬಾಭಿನ್ನ ಶ್ರೀಹರಿಗೆ ನಮೋನಮಃ.

೧೦. ವಿತಲಲೋಕವಿರುವ ಕೆಳತೊಡೆಗಳಲ್ಲಿರುವ ಭಾ.ಮು.ಪ್ರಾ ಬಿಂಬಾಭಿನ್ನ ಶ್ರೀಹರಿಗೆ ನಮೋನಮಃ.

೧೧. ಸುತಲಲೋಕವಿರುವ ಎರಡು ಮಂಡಿಗಳಲ್ಲಿರುವ ಭಾ.ಮು.ಪ್ರಾ. ಬಿಂಬಾಭಿನ್ನ ಶ್ರೀಹರಿಗೆ ನಮೋನಮಃ.

೧೨. ತಲಾತಲಲೋಕವಿರುವ ಎರಡು ಕಣಕಾಲುಗಳಲ್ಲಿರುವ ಭಾ.ಮು.ಪ್ರಾ ಬಿಂಬಾಭಿನ್ನ ಶ್ರೀಹರಿಗೆ ನಮೋನಮಃ.

೧೩.ಮಹಾತಲಲೋಕವಿರುವ ಎರಡು ಮಣಿಗಂಟುಗಳಲ್ಲಿರುವ ಭಾ.ಮು.ಪ್ರಾ ಬಿಂಬಾಭಿನ್ನ ಶ್ರೀಹರಿಗೆ ನಮೋನಮಃ.

೧೪. ರಸಾತಲಲೋಕವಿರುವ ಎರಡು ಪ್ರಪದಗಳಲ್ಲಿರುವ ಭಾ.ಮು.ಪ್ರಾ. ಬಿಂಬಾಭಿನ್ನ ಶ್ರೀಹರಿಗೆ ನಮೋನಮಃ.

೧೫. ಪಾತಾಳವಿರುವ ಎರಡು ಪಾದಗಳಡಿಗಳಲ್ಲಿರುವ ಭಾ.ಮು.ಪ್ರಾ ಬಿಂಬಾಭಿನ್ನ ಶ್ರೀಹರಿಗೆ ನಮೋನಮಃ.

೧೬. ಹೆಬ್ಬೆಟ್ಟಿನಲ್ಲಿರುವ ಮೂರುವರೆಕೋಟಿ ತೀರ್ಥಗಳಲ್ಲಿರುವ ತೀರ್ಥರೂಪಿ ಹಾಗೂ ವಾಯುಕೂರ್ಮ, ಶ್ರೀಕೂರ್ಮ, ವಿಷ್ಣುಕೂರ್ಮಗಳನ್ನು ಧರಿಸಿರುವ ವಿರಾಡ್ರೂಪಿಗಳಾಭಿನ್ನ ಬಿಂಬನಿಗೆ ನಮೋನಮಃ.

# <u>ಐಕ್ಯ ಚಿಂತನೆ</u>

೧. ಹದಿನಾಲ್ಕು ಲೋಕಗಳಲ್ಲಿರುವ ಭಗವದ್ರೂಪಗಳು, ಅನಂತ ಅವತಾರ ರೂಪಗಳು, ಆಯಾ ಸಜ್ಜೀವರ ಶರೀರದೊಳಗಿರುವ ಭಗವದ್ರೂಪಗಳಿಂದಭಿನ್ನವಾದ ಅವರವರ ಬಿಂಬಗಳಿಗೆ ನಮಸ್ಕಾರ.

೨.ಆಯಾ ಲೋಕಗಳಲ್ಲಿರುವ ಸಕಲ ಸಜ್ಜೀವರ ಬಿಂಬಗಳಿಂದ ಅಭಿನ್ನವಾದ ಲೋಕಾಭಿಮಾನಿ ದೇವತೆಗಳಬಿಂಬಗಳಿಗೆ ನಮೋನಮಃ.

೩. ಆಯಾ ಲೋಕಾಭಿಮಾನಿ ದೇವತಾಬಿಂಬಾಭಿನ್ನ ಆಯಾಲೋಕನಿಯಾಮಕ ಭಗವದ್ರೂಪಗಳಿಗೆ ನಮೋನಮಃ.

೪. ಆಯಾ ಲೋಕಾನಿಯಾಮಕ ಭಗವದ್ರೂಪಗಳಾಭಿನ್ನ ವಿರಾಟ್ ರೂಪಿ ಭವಂತನಿಗೆ ನಮೋನಮಃ.

೫. ವಿರಾಡ್ರೂಪಾಭಿನ್ನ ಸಕಲ ಸೋತ್ತಮರ ಬಿಂಬಾಕ್ಕೆ ನಮೋನಮಃ.

೬. ಸಕಲಸೋತ್ತಮ ಬಿಂಬಾಭಿನ್ನ ಪರಮಗುರುಬಿಂಬಕ್ಕೆ ನಮೋನಮಃ

೭. ಪರಮಗುರು ಬಿಂಬಾಭಿನ್ನ ಗುರುಬಿಂಬಕ್ಕೆ ನಮೋನಮಃ.

೮. ಗುರುಬಿಂಬಾಭಿನ್ನ ಅಸ್ಮದ್ಬಿಂಬಕ್ಕೆ ನಮೋನಮಃ.

೯. ಪತಿಬಿಂಬಾಭಿನ್ನ ನನ್ನ ಬಿಂಬಕ್ಕೆ ನಮೋನಮಃ.

೧೦. ಇಂದು ಬೆಳಿಗ್ಗಿನಿಂದ ನಾಳೆ ಬೆಳಿಗ್ಗಿನವರೆಗೂ ಬಿಂಬರೂಪಿ ಭಗವಂತನು ವಾಯು, ಗುರುಗಳಲ್ಲಿ ನಿಂತು ಮಾಡಿ ಮಾಡಿಸುವ ಸಕಲ ಇಂದ್ರಿಯಗಳಿಂದಾಗುವ ಕಾರ್ಯ, ಭೋಗಗಳಲ್ಲಿ ಪ್ರಕಟವಾಗುವ ಸಕಲ ಪದಾರ್ಥಗಳಲ್ಲಿರುವ ಸಕಲ ಭಗವದ್ರೂಪಗಳಿಗೂ ವಿರಡ್ರೂಪಿಗೆ ಶೋಡಷೋಪಚಾರ ಪೂಜೆ ಎಂಬ ಅನುಸಂಧಾನವನ್ನು ನಿರಂತರ ಮಾಡಿಸಿ ಸ್ಮರಣೆ ಪೂರ್ವಕ ಅರ್ಪಣೆ ಮಾಡಿಸಿಕೊಳ್ಳುವಂಥಹ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಬಿಂಬ ಮೂರ್ತಿಗೆ ನಮೋನಮಃ.

॥ಶ್ರೀಕೃಷ್ಣಾರ್ಪಣಮಸ್ತು॥